ನಗರಪಾಲಿಕೆಗೆ ಹತ್ತಿರವಿದ್ದರಿಂದ ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡಿಸಬೇಕೆಂದು ಮನವಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಶಾಸಕನಾಗಿ ನಾನೂ ಸಹ ತಮ್ಮ ಇಲಾಖೆಗೆ ಇದರ ಬಗ್ಗೆ ಪತ್ರವನ್ನು ಬರೆದಿದ್ದೇನೆ. ದಯವಿಟ್ಟು ಇದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಬೇಕು. ಅಲ್ಲಿನ ಪಂಚಾಯಿತಿ ಕಾರ್ಯದರ್ಶಿಯವರು ನಿರ್ದಿಷ್ಟ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ, ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿಯವರು ಎಲ್ಲಾ ಕಡತಗಳನ್ನು ಅಲ್ಲಿಂದ ತಂದಿದ್ದರು. ಸಾರ್ವಜನಿಕರಿಗೆ ಗ್ರಾಮಪಂಚಾಯಿತಿಯ ಕಾರ್ಯದರ್ಶಿಯವರು ಸಿಗುತ್ತಿಲ್ಲ. ಆ ಗ್ರಾಮ ಪಂಚಾಯಿತಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ ಸಂಬಂಧಿಸಿದಂತೆ ಈಗಾಗಲೇ ಹೆಚ್ಚುವರಿ ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ತಾವು ಆ ಗ್ರಾಮಗಳ ಎಲ್ಲಾ ಹೆಸರನ್ನು ಪಟ್ಟಿ ಮಾಡಿಕೊಟ್ಟರೆ 1998-99ನೇ ಸಾಲಿನಲ್ಲಿ ಕುಡಿಯುವ ನೀರಿನ ಕಿರು ನೀರು ಸರಬರಾಜು ಯೋಜನೆಗೆ ಆದೇಶ ಕೊಡುತ್ತೇನೆ. ಮತ್ತೆ ಆ ಗ್ರಾಮ ಮಹಾನಗರ ಪಾಲಿಕೆಗೆ ಸೇರಬೇಕೆಂದರೆ ನಮ್ಮ ಯಾವುದೇ ಆಕ್ಷೇಪಣೆ ಇಲ್ಲ. ಮಹಾನಗರ ಪಾಲಿಕೆಗೆ ಸೇರಿರತಕ್ಕ ಗ್ರಾಮಗಳನ್ನು ಪ್ರತ್ಯೇಕ ಗ್ರಾಮಗಳನ್ನಾಗಿ ಉಳಿಸಿಕೊಳ್ಳಲು ಬಹಳ ಜನರು ಪ್ರಯತ್ನ ಮಾಡುತ್ತಾರೆ. ಶಾಸಕರು ಆ ಗ್ರಾಮವನ್ನು ಮಹಾನನಗರ ಪಾಲಿಕೆಗೆ ಸೇರಿಸಲು ಬಯಸುವುದಾದರೆ ಈ ದಿನವೇ ಒಪ್ಪಿಗೆ ಕೊಡುತ್ತೇವೆ.

ಅಧೀನ ನ್ಯಾಯಾಲಯಗಳಲ್ಲಿನ ನ್ಯಾಯಧೀಶರಿಗೆ ಮಧ್ಯಂತರ ಪರಿಹಾರ

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಕಾನೂನು ಸಚಿವರು ಇರಬೇಕಾಗಿತ್ತು, ಆದರೆ ಅವರು ಇಲ್ಲ, ಪರವಾಗಿಲ್ಲ, ಮುಖ್ಯಮಂತ್ರಿಗಳು ಇದ್ದಾರೆ. Based on the judgment of the Hon'ble Supreme Court of India, the Government of India constituted a Commission by name 'First National Judicial Pay Commission'. ಅದು ರಾಷ್ಟ್ರಮಟ್ಟದಲ್ಲಿ ಎಲ್ಲ ರಾಜ್ಯಗಳಲ್ಲೂ ಕೂಡ the service conditions of the subordinate judges. ಅದನ್ನು ಉತ್ತಮ ಮಾಡುವ ಒಂದು ದೃಷ್ಟಿಯನ್ನು ಇಟ್ಟುಕೊಂಡು ಈ ಒಂದು ಆಯೋಗವನ್ನು ಕೇಂದ್ರಸರ್ಕಾರದವರು ನೇಮಕ ಮಾಡಿದ್ದಾರೆ. ಅದು ಎಲ್ಲಾ ರಾಜ್ಯಗಳಿಂದ ವಿಚಾರಣೆಯನ್ನು ಪ್ರಾರಂಭ ಮಾಡಿದೆ. ಈ ಮಧ್ಯೆ ಏನಾಗಿದೆ ಎಂದರೆ ಒಂದೊಂದು ರಾಜ್ಯದಲ್ಲಿ ಸಬಾರ್ಡಿನೇಟ್ ಜಡಜ್ಸ್‌ಗೆ ಪೇ ಸ್ಕೇಲ್ ವ್ಯತ್ಯಾಸ ಇದ್ದಿದ್ದರಿಂದ ಒಂದು ಇಂಟರಿಯಂ ರಿಲೀಫ್‌ನ್ನು ಆ ಕಮಿಷನ್ ಶಿಫಾರಸ್ಸು ಮಾಡಿದೆ. The Commission headed by Justice K. Jagannath Shetty in its interim order dated 31.01.1998. ಒಂದು ಇಂಟರಿಯಂ ರಿಲೀಫ್ ಕೊಡಬೇಕು ಎಂದು ಆಯಾ ರಾಜ್ಯಗಳನ್ನು ಕೇಳಿಕೊಂಡಿದ್ದಾರೆ. ಆ ದಿಸೆಯಲ್ಲಿ ಇವೊತ್ತು ಕರ್ನಾಟಕ ರಾಜ್ಯದಲ್ಲೂ ಕೂಡ ಒಂದು ಅಧೀನ ನ್ಯಾಯಾಲಯಗಳಲ್ಲಿ ಕೆಲಸ ಮಾಡತಕ್ಕಂಥ ನ್ಯಾಯಾಧೀಶರುಗಳಿಗೆ ಒಂದು ಮಧ್ಯಂತರ ಪರಿಹಾರವನ್ನು ಕೊಡತಕ್ಕಂಥ ಕಮೀಶನ್ನಿನ ಮನವಿ ಸರ್ಕಾರದಲ್ಲಿ ಇದೆ.

ದಯಮಾಡಿ ಮುಖ್ಯಮಂತ್ರಿಗಳು ಜಸ್ಟೀಸ್ ಜಗನ್ನಾಥ್‌ರವರ ಆಯೋಗ ಏನು ಇದೆ ಆ ಆಯೋಗದ ಒಂದು ಮಧ್ಯಂತರ ಆದೇಶ ಏನು ಇದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಮಧ್ಯಂತರ ವರದಿ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಆಯೋಗ ಕೊಟ್ಟಿರತಕ್ಕಂಥ ವರದಿಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಈ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸಲಪೇಕ್ಷಿಸುತ್ತೇನೆ.

ಆಳಂದ ತಾಲ್ಲೂಕಿನ ಭುಸನೂರ್ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಹಣ ನೀಡದೇ ಇರುವ ಬಗ್ಗೆ

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಅಧ್ಯಕ್ಷರೆ, ಆಳಂದ್ ತಾಲ್ಲೂಕಿನಲ್ಲಿ ಭೂಸನೂರ್ ಎನ್ನುವ ಶುಗರ್ ಫ್ಯಾಕ್ಟರಿ ಇದೆ. ಆ ಕಾರ್ಖಾನೆಯ ವತಿಯಿಂದ ಅಲ್ಲಿನ ರೈತರಿಗೆ 1994-95ನೇ ಸಾಲಿನ ದುಡ್ಡನ್ನು ಇಲ್ಲಿಯವರೆಗೆ ಕೊಟ್ಟಿಲ್ಲ. ಅಲ್ಲಿನ ರೈತರು ಅದರಿಂದಾಗಿ ಬಹಳ ಕಂಗಾಲಾಗಿದ್ದಾರೆ. ನಾನು ಅಲ್ಲಿಗೆ ಹೋದರೆ ಕ್ಷೇತ್ರದ ಜನರೆಲ್ಲಾ ನೀವು ಏತಕ್ಕೆ ಶಾಸಕರಾಗಿದ್ದೀರಿ ? ನಮ್ಮ ದುಡ್ಡು ಏತಕ್ಕೆ ಕೊಡಿಸುತ್ತಿಲ್ಲ, ಜನತಾ ದಳದ ಸರ್ಕಾರ ಎಂದರೆ ರೈತರ ಸರ್ಕಾರ ಎಂದು ಕರೆಯುತ್ತಾರೆ ನೀವು ಅವರಿಗೆ ಕೇಳಬೇಕು, ನೀವು ನಮ್ಮೊಂದಿಗೆ ಧ್ವನಿಗೂಡಿಸಬೇಕು, ಅವರಿಗೆ ಜಾಗ್ರತೆ ಮಾಡಬೇಕು ಎಂದು ನನ್ನನ್ನು ಘೇರಾವ್ ಮಾಡುತ್ತಿದ್ದಾರೆ. ಸರ್ಕಾರದವರು ಸದರಿ ಸಕ್ಕರೆ ಕಾರ್ಖಾನೆಗೆ ಸದಸ್ಯರನ್ನು ಕೂಡ ನಾಮಿನೇಟ್ ಮಾಡಿದ್ದಾರೆ. ಬಹಳ ನೊಂದ ಮನಸ್ಸಿನಿಂದ ಹೇಳುವ ವಿಚಾರ ಎಂದರೆ ಅವರು ಏನಾದರೂ ವಿವರವನ್ನು ಕೇಳಿದರೆ ಕೊಡುತ್ತಿಲ್ಲ. ಹೋದ ಸಾರಿ ಕೇಳಿದಾಗ ಮಾತ್ರ ಒಂದೇ ಒಂದು ಉತ್ತರವನ್ನು ಈ ಸದನದಲ್ಲಿ ಒದಗಿಸಿದ್ದರು. ಅಲ್ಲಿ ನಡೆಯತಕ್ಕಂಥ ವಿಷಯಗಳಲ್ಲಿ ನಾನು ಒಂದು ವಿಷಯವನ್ನು ನೆನಪು ಇಟ್ಟುಕೊಂಡಿದ್ದೇನೆ. ಅದು ಏನೆಂದರೆ ಅಲ್ಲಿನ ನಾಮಿನೇಟೆಡ್ ಮೆಂಬರ್ಸ್ ಐವತ್ತು ಸಾವಿರ ಗೋಣಿ ಚೀಲಗಳನ್ನು ಖರೀದಿ ಮಾಡಿದ್ದಾರೆ. ಒಂದೊಂದು ಚೀಲಕ್ಕೆ 31.75ಪೈಸೆ ಧಾರಣೆಯನ್ನು ತೋರಿಸಿದ್ದಾರೆ. ಆದರೆ ಆ ಗೋಣಿಚೀಲದ ಕಿಮ್ಮತ್ತು ಇಪ್ಪತ್ತು ರೂಪಾಯಿಗಿಂತ ಹೆಚ್ಚಿಗೆ ಇರುವುದಿಲ್ಲ. ಆ ಐವತ್ತು ಸಾವಿರ ಚೀಲದ ಖರೀದಿಯಲ್ಲಿ ಕನಿಷ್ಟ ಆರುಲಕ್ಷ ರೂಪಾಯಿಗಳ ವ್ಯವಹಾರ ಆಗಿದೆ. ಅದೇ ತರಹ ಎಲ್ಲವನ್ನೂ ಖರೀದಿ ಮಾಡಿ ಆ ಫ್ಯಾಕ್ಟರಿಯಲ್ಲಿ ಎಲ್ಲವನ್ನೂ ಲೂಟಿ ಮಾಡುತ್ತಿದ್ದಾರೆ. ಅಲ್ಲಿನ ರೈತರ ಬಗ್ಗೆ ಅವರಿಗೆ ಸ್ವಲ್ಪ ಕೂಡ ಕಳಕಳಿ ಇಲ್ಲ. ನಾನು ಹೊಸದಾಗಿ ಶಾಸಕನಾಗಿದ್ದೇನೆ. ಈ ಹಿಂದೆ ಶ್ರೀ ಗೋವಿಂದ ಪಿ. ಒಡೆಯರಾಜ್‌ರವರು ಹದಿನೈದು ವರ್ಷಗಳ ಕಾಲ ಶಾಸಕರಾಗಿದ್ದರು, ಅವರು ಆ ಶುಗರ್ ಫ್ಯಾಕ್ಟರಿಯ ಸದಸ್ಯರಾಗಿದ್ದರು. ಆ ನಂತರ ಶ್ರೀ ಜಿ. ರಾಮಕೃಷ್ಣರವರು ಶಾಸಕರಾಗಿದ್ದರು, ಸಚಿವರಾಗಿದ್ದರು ಅವರೂ ಕೂಡ ಅದಕ್ಕೆ ಹತ್ತು ವರ್ಷ ಸದಸ್ಯರಾಗಿದ್ದರು. ಇವೊತ್ತು ನಾನು ಆ ಕ್ಷೇತ್ರದ ಶಾಸಕನಿದ್ದೂ ಕೂಡ ಆ ಸಕ್ಕರೆ ಕಾರ್ಖಾನೆಯ ಸದಸ್ಯನಿಲ್ಲ. ನೀವು ಸದಸ್ಯರಿಲ್ಲ, ನಿಮ್ಮನ್ನು ಮೀಟಿಂಗ್‌ಗೆ ಕರೆಯುವುದಿಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ನಾನು ಸದಸ್ಯನಿದ್ದರೆ ಅಲ್ಲಿ ನಡೆಯುವ ಲೋಪದೋಷಗಳನ್ನು ಪರಿಹಾರ ಮಾಡಲಿಕ್ಕೆ ನಾನು ಪ್ರಯತ್ನ ಮಾಡಬಹುದು. ರೈತರ ಪರವಾಗಿ ರೈತರಿಗೆ ಬೇಕಾದ ನ್ಯಾಯವನ್ನು ಕೇಳುತ್ತೇನೆ. ಈಗ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ